ತ್ರೈಮಾಸಿಕ ಪತ್ರಿಕೆ ಖಾಸಗಿ ಪ್ರಸಾರಕ್ಕಾಗಿ ಮಾತ್ರ Email: ashrayausa@gmail.com

# ಅರಿವಿನ ಅರಮನೆ

ಜನವರಿ - 2023 ಆಶ್ರಯ ಸಂಸ್ಥೆಯ ಜ್ಞಾನ ಅಂಗಳ www.ashraya-usa.org

## ಸೀಡ್ ಸೆನ್‌ಸೋರಿಯಮ್

## ಹನೂರು ತಾ. ಚಾಮರಾಜನಗರ ಜಿಲ್ಲೆ



*ಸೀಡ್ ಸೆನ್‌ಸೋರಿಯಮ್ ಶಾಲೆಗಳು: ಚಾ.ನಗರ ಜಿಲ್ಲೆ, ಹನೂರು ತಾಲ್ಲೂಕಿನ ಸರ್ಕಾರಿ ಹಿ.ಪ್ರಾ.ಶಾಲೆ, ಕಣ್ಣೂರು, ಸ.ಹಿ.ಪ್ರಾ.ಶಾಲೆ ಹಲಗಾಪುರ, ಸ.ಮಾ.ಹಿ.ಪ್ರಾ.ಶಾಲೆ ಹನೂರು, ಸ.ಹಿ.ಪ್ರಾ.ಶಾಲೆ ರಾಮಾಪುರ, ಸ.ಹಿ.ಪ್ರಾ.ಶಾಲೆ ಕೆಂಪಯ್ಯನಹಟ್ಟಿ, ಸ.ಹಿ.ಪ್ರಾ.ಶಾಲೆ ಅಜ್ಜೀಪುರ, ಸ.ಹಿ.ಪ್ರಾ.ಶಾಲೆ ಬಂಡಳ್ಳಿ, ಸ.ಹಿ.ಪ್ರಾ.ಶಾಲೆ, ಲೊಕ್ಕನಹಳ್ಳಿ ಮತ್ತು ಸ.ಹಿ.ಪ್ರಾ.ಶಾಲೆ ಶಾಗ್ಯ.*

### ಸಂಪಾದಕರ ನುಡಿ . . .

ಮಗುವು ತನ್ನ ಆಸಕ್ತಿ ಕ್ಷೇತ್ರವನ್ನು ಆಯ್ಕೆಮಾಡಿಕೊಂಡು ಕಲಿಕೆಯಲು ಇಚ್ಚಿಸಿದಾಗ ತನ್ನ ಗುರಿಯನ್ನು ಮುಟ್ಟಲು ಸಾಧ್ಯವಾಗುತ್ತದೆ. ಚಟುವಟಿಕೆ ಆಧಾರಿತ ಕಲಿಕೆಯು ಮಕ್ಕಳ ಜ್ಞಾನವನ್ನು ಸ್ಥಿರಗೊಳಿಸುತ್ತದೆ. ಆಸಕ್ತಿಯನ್ನು ಹೆಚ್ಚಿಸಿ ಕಲಿಕೆಗೆ ಪೂರಕವಾದ ವಾತಾವರಣವನ್ನು ಉಂಟುಮಾಡುತ್ತದೆ. ವಿದ್ಯಾರ್ಥಿ ಕೇಂದ್ರಿತ ಕಲಿಕೆಗೆ ಹೆಚ್ಚು ಒತ್ತು ನೀಡುವುದಲ್ಲದೆ ಮಕ್ಕಳ ವಯೋಮಾನಕ್ಕೆ ತಕ್ಕಂತೆ ಚಟುವಟಿಕೆಗಳನ್ನು ಆಶ್ರಯ ಸಂಸ್ಥೆಯು ಯೋಜಿಸಿ ಜ್ಞಾನ ಬತ್ತಳಿಕೆಯನ್ನು ಇಮ್ಮಡಿಗೊಳಿಸುತ್ತಿದೆ.

**ಸಾವುಕರಾಜು. ಡಿ., ಕೊಳ್ಳೇಗಾಲ...**

**ಸ.ಹಿ.ಪ್ರಾ.ಶಾಲೆ, ಕಣ್ಣೂರು ಹನೂರು ತಾ.**

## ಎಲ್ಲೇಮಾಳ ಶಾಲೆಯಲ್ಲಿ ಕೆಫೆಸೆನ್‌ಸೋರಿಯಮ್ ಪ್ರಾರಂಭ



2022–23ನೇ ಶೈಕ್ಷಣಿಕ ವರ್ಷದಿಂದ ಸ.ಹಿ.ಪ್ರಾ.ಶಾಲೆ, ಅಜ್ಜೀಪುರದಲ್ಲಿ ಕೆಫೆಸೆನ್‌ಸೋರಿಯಮ್ ಪ್ರಾರಂಭಿಸಲಾಯಿತು. ಆಶ್ರಯ ಸಂಸ್ಥೆಯು ಶಾಲೆಗೆ 10 ಟ್ಯಾಬ್‌ಗಳನ್ನು ನೀಡಿ ಮೂಲಕ ಮಕ್ಕಳು ಸ್ವಯಂ ಕಲಿಯಲು ಅನುವು ಮಾಡಿ ಕೊಟ್ಟಿದೆ.

ಈ ಶಾಲೆಯಲ್ಲಿ ಎಂ.ಎಲ್.ಎಲ್. ಕ್ಲಬ್, ಸೈನ್ಸ್ ಕ್ಲಬ್, ಆರ್ಟ್ ಕ್ಲಬ್, ಕಂಪ್ಯೂಟರ್ ಕ್ಲಬ್ ಮತ್ತು ಬುಕ್ ಕ್ಲಬ್‌ಗಳನ್ನು ಪ್ರಾರಂಭಿಸಲಾಗಿದೆ. ಸಂಸ್ಥೆ ವೆಬ್‌ಸೈಟ್‌ನಲ್ಲಿ ಅಳವಡಿಸಿರುವ ಪಾಠಗಳನ್ನು ವಿದ್ಯಾರ್ಥಿಗಳು ತಾವು ಸೇರಿರುವ ಕ್ಲಬ್‌ನಲ್ಲಿನ ಚಟುವಟಿಕೆಗಳನ್ನು ವೀಕ್ಷಿಸಿ, ಅದಕ್ಕೆ ಸಂಬಂಧಿಸಿದ ಕಾರ್ಯ ಚಟುವಟಿಕೆಗಳನ್ನು ಕೈಗೊಂಡು ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡುತ್ತಿದ್ದಾರೆ. ವಾರಕ್ಕೊಮ್ಮೆ ಸಂಸ್ಥೆಯ ಶಿಕ್ಷಕರು ಈ ಶಾಲೆಗೆ ಭೇಟಿ ನೀಡಿ ಮಕ್ಕಳಿಗೆ ಸಲಹೆ ಮತ್ತು ಮಾರ್ಗದರ್ಶನ ನೀಡುತ್ತಾರೆ.

ಮುಖ್ಯಶಿಕ್ಷಕರು ಹಾಗೂ ಶಿಕ್ಷಕರ ವೃಂದದ ಸಹಕಾರದಿಂದ ಸಂಸ್ಥೆಯು ವಿವಿಧ ಸಂಘಗಳನ್ನು ರಚಿಸಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವ ಹಂಬಲಹೊಂದಿದೆ. ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಹಕಾರ ಮತ್ತು ಮಾರ್ಗದರ್ಶನದಲ್ಲಿ ಇನ್ನಷ್ಟು ಶಾಲೆಗಳನ್ನು ಪ್ರಾರಂಭಿಸಲಾಗುವುದು.

## ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿ ಆಲ್‌ರೌಂಡರ್ ಕ್ಲಬ್

ನಿರ್ದಿಷ್ಟ ವಿಷಯಕ್ಕೆ ಸೀಮಿತವಾಗದೆ ವಿಷಯ ಎಲ್ಲೆಯನ್ನು ಸವಿಸ್ತಾರಗೊಳಿಸುವುದರ ಮೂಲಕ ಮಕ್ಕಳಿಗೆ ಸಕಲ ಜ್ಞಾನವನ್ನು ವಿವಿಧ ಕ್ಷೇತ್ರದಲ್ಲಿ ನೈಪುಣ್ಯತೆಯನ್ನು ಹೆಚ್ಚಿಸುವ ಸಲುವಾಗಿ ಆಲ್‌ರೌಂಡರ್ ಕ್ಲಬ್ ಪ್ರಾರಂಭಿಸಲಾಗಿದೆ. ಆಗ ಮಾತ್ರ ನಿರೀಕ್ಷಿತ ಕಲಿಕೆ ಅರ್ಥಪೂರ್ಣವಾಗುತ್ತದೆ. ಈ ನಿಟ್ಟಿನಲ್ಲಿ ಬೆಂಗಳೂರಿನ ಆಶ್ರಯ ಸಂಸ್ಥೆಯು ದಾಪುಗಾಲು ಹಾಕುತ್ತಾ ಮಕ್ಕಳಿಗೆ ವಿಜ್ಞಾನ ಪ್ರಾಜೆಕ್ಟ್‌ಗಳ ಮೂಲಕ ಸ್ವಕಲಿಕೆಗೆ ಆದ್ಯತೆ ನೀಡುತ್ತಿದೆ. ಮಗು ಪ್ರತಿಯೊಂದು ವಿಷಯದಲ್ಲೂ ತನ್ನ ಸ್ವಸಾಮರ್ಥ್ಯದಿಂದ ಜ್ಞಾನ ಗಳಿಸಲು ಅನುಕೂಲವಾಗುತ್ತಿದೆ. ಬುಕ್ ಕ್ಲಬ್‌ನ ಮೂಲಕ ಕಥೆ ಬರೆಯುವುದು, ಕಂಪ್ಯೂಟರ್‌ನ ಮೂಲಕ ತನ್ನ ಕಲಿಕೆಯನ್ನು ಪ್ರದರ್ಶಿಸುವುದು, ಚಿತ್ರಕಲೆಯ ಮೂಲಕ ವಿಷಯ ವಸ್ತುವನ್ನು ಪ್ರಚುರಪಡಿಸುವುದು. ಹೀಗೆಯೇ 3 ರಿಂದ 4 ಕ್ಲಬ್‌ನಲ್ಲಿ ತಾನು ಗಳಿಸಿರುವ ಜ್ಞಾನವನ್ನು ಬಳಸಿಕೊಂಡು ಪ್ರಸ್ತುತ ಪಡಿಸುವುದು ಆಲ್‌ರೌಂಡರ್ ತಂಡದ ಮಕ್ಕಳ ಜವಾಬ್ದಾರಿಯಾಗಿರುತ್ತದೆ.







## ಕಲಿಕಾ ಫಲಗಳ ಗಳಿಕೆಗಾಗಿ ಪರಿಹಾರ ಬೋಧನೆ

ಶಿಕ್ಷಣ ಎಲ್ಲಾ ಅಂಶಗಳು ಮಗುವಿನ ಬೌದ್ಧಿಕ ಬೆಳವಣಿಗೆ ಮತ್ತು ಸರ್ವಾಂಗೀಣ ಅಭಿವೃದ್ಧಿ ಸಾಧಿಸುವುದರ ಮೂಲಕ ಮಕ್ಕಳಲ್ಲಿ ಪರಿಪೂರ್ಣ ವ್ಯಕ್ತಿತ್ವ ರೂಪಿಸುವುದು ಪೂರಕ ಬೋಧನೆ ಉದ್ದೇಶ. ಪ್ರತಿ ವಿದ್ಯಾರ್ಥಿಯೂ ತನ್ನ ಕಲಿಕಾ ಸಾಮರ್ಥ್ಯವನ್ನು ಅಭಿವ್ಯಕ್ತ ಗೊಳಿಸುವ ದೃಷ್ಟಿಯಿಂದ ಪೂರಕ ಬೋಧನೆಯನ್ನು ಆಶ್ರಯ ಸಂಸ್ಥೆ ಇಲಾಖೆ ಸಹಯೋಗದಲ್ಲಿ ಹನೂರು ತಾಲ್ಲೂಕಿನ 9 ಸರ್ಕಾರಿ ಶಾಲೆಗಳಲ್ಲಿ ಅನುಷ್ಠಾನಗೊಳಿಸಿದೆ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗ್ರೋಭಿ ಪರೀಕ್ಷೆಯ ಮೂಲಕ ಆಯ್ಕೆಮಾಡಿಕೊಂಡು ಅಗತ್ಯ ಕಲಿಕಾ ಸಾಮರ್ಥ್ಯಗಳನ್ನು ಕಲಿಸಲಾಗುತ್ತಿದೆ. ಹಂತ–1 ರಲ್ಲಿರುವ ಮಕ್ಕಳನ್ನು ಆಯ್ಕೆಮಾಡಿಕೊಳ್ಳಲಾಗುತ್ತದೆ. ಇಂತಹ ಮಕ್ಕಳಿಗೆ ವಿಶೇಷ ಕಾಳಜಿವಹಿಸಿ ಹಂತ–2ಕ್ಕೆ ತರಲಾಗುತ್ತದೆ.

## ಎಂ.ಎಲ್.ಎಲ್. ಮೈಂಡ್ ಮ್ಯಾಪ್

ಗ್ರಂಥಾಲಯದ ನೂತನ ಕಾರ್ಯಕ್ರಮವಾದ 'ಕಥೆ ಆಧಾರಿತ ಚಟುವಟಿಕೆ' ಬೋಧನೆಯನ್ನು 'ಮೈಂಡ್ ಮ್ಯಾಪ್' ಮೂಲಕ ವಿದ್ಯಾರ್ಥಿ ಕೇಂದ್ರಿತ ಕಲಿಕೆ ಉಂಟು ಮಾಡುವ ಉದ್ದೇಶದಿಂದ ಹನೂರು ತಾಲ್ಲೂಕಿನ 9 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಈ ಕಾರ್ಯಕ್ರಮವನ್ನು ನಿರ್ವಹಿಸುತ್ತಿದ್ದಾರೆ. 'ಕನಿಷ್ಠ ಕಲಿಕಾ ಮಟ್ಟ' ಉದ್ದೇಶ ಆಧಾರಿತ ಚಟುವಟಿಕೆಗಳನ್ನು ಈ ಶಾಲೆಗಳಲ್ಲಿ ಅನುಷ್ಠಾನಗೊಳಿಸಿ ಎಂ.ಎಲ್.ಎಲ್. ಕ್ಲಬ್‌ನ ಮಕ್ಕಳು ತಾವು ಕಲಿತ ಪರಿಕಲ್ಪನೆಗಳಿಗೆ ಮೈಂಡ್ ಮ್ಯಾಪ್ ರಚಿಸಿರುವುದು. ಇದರಿಂದ ಮಕ್ಕಳಿಗೆ ಪರಿಕಲ್ಪನೆಗಳನ್ನು ವಿಸ್ತರಿಸುವುದು, ವರ್ಗೀಕರಿಸುವುದು, ಸಾಮಾನ್ಯೀಕರಿಸುವ ಕೌಶಲ ಬೆಳೆಯುತ್ತಿದೆ.



# » ವಿಜ್ಞಾನ ಅರಮನೆ «

ವಿಜ್ಞಾನ ಕೌತುಕ ತಿಳಿಯಲು

## ಶೇಕ್ಸ್‌ಪಿಯರ್ ನಾಟಕ ಪ್ರದರ್ಶನ

ಬುಕ್ ಕ್ಲಬ್ ತಂಡದ ವಿದ್ಯಾರ್ಥಿಳಿಗೆ ಈ ತಿಂಗಳು ನಾಟಕ ಪ್ರದರ್ಶನ ಮಾಡಿದರು. ಹನೂರು ಮತ್ತು ಗುಂಡ್ಲುಪೇಟೆ ತಾಲ್ಲೂಕಿನ ಆಯ್ದ ಶಾಲೆಗಳಲ್ಲಿ ಬುಕ್ ಕ್ಲಬ್‌ನ ವಿದ್ಯಾರ್ಥಿಗಳು ಶೇಕ್ಸ್‌ಪಿಯರ್ ನಾಟಕವನ್ನು ಮಾಡಿದರು. ಮಕ್ಕಳಲ್ಲಿ ನಾಟಾಭಿರುಚಿಯನ್ನು ಬೆಳೆಸುವ ದೃಷ್ಟಿಕೋನದಿಂದ ಎಲ್ಲಾ ಶಾಲೆಗಳಲ್ಲಿಯೂ ನಾಟಕವನ್ನು ಏರ್ಪಡಿಸಲಾಗಿತ್ತು. ಪಾತ್ರಕ್ಕೆ ತಕ್ಕಂತೆ ವೇಷಭೂಷಣ ಧರಿಸಿ ಮಕ್ಕಳು ನಾಟಕವನ್ನು ಅದ್ಭುತವಾಗಿ ಪ್ರದರ್ಶನ ಮಾಡಿದರು.



## ಅರವಿಂದ ಗುಪ್ತ ಪ್ರಯೋಗ– ನೀವೇ ಮಾಡಿ ನೋಡಿ!



**ಪ್ರಯೋಗ:** ಸರಳ ಬಲೂನ್ ದೋಣಿ

**ಬೇಕಾಗುವ ಸಾಮಾಗ್ರಿಗಳು** : ಥರ್ಮೋಕೋಲ್, ಬಲೂನ್, ದಾರ, ರಬ್ಬರ್ ತುಂಡು, ಕಟರ್, ಟೇಪು

**ಪ್ರಾಯೋಗಿಕ ವಿಧಾನ** : ಮೊದಲಿಗೆ ಥರ್ಮೋಕೋಲಿನ ಮೇಲೆ ದೋಣಿಯ ಬಾಹ್ಯರೇಖೆಯನ್ನು ಗುರುತಿಸಿಕೊಳ್ಳುವುದು. ನಂತರ ಕಟರ್ ಸಹಾಯದಿಂದ ಕತ್ತರಿಸಿ ದೋಣಿಯಾಕಾರದ ಥರ್ಮೋಕೋಲಿನ ಮುಂಭಾಗದಲ್ಲಿ ತ್ರಿಕೋನಾಕಾರದ ರಬ್ಬರ್‌ನ್ನು ಅಂಟಿಸಿ. ಒಂದು ಬಲೂನ್ ತೆಗೆದುಕೊಂಡು ಬಲೂನಿನ ಒಳಗೆ ಗಾಳಿಯನ್ನು ತುಂಬಿಸಿ ಬಲೂನ್ ಉಬ್ಬಿದ ನಂತರದಲ್ಲಿ ಸ್ಟ್ರಾನ್ನು ಗಾಳಿಯು ಹೋಗದಂತೆ ಹಿಡಿದಿಟ್ಟುಕೊಳ್ಳುವುದು. ಬಲೂನ್‌ನ್ನು ತ್ರಿಕೋನಾಕಾರದ ರಬ್ಬರ್ ಮೇಲಿಟ್ಟು ಸ್ಟ್ರಾನ್ನು ಥರ್ಮೋಕೋಲಿಗೆ ಅಂಟಿಸಿ ನೀರಿನಲ್ಲಿ ನಾವು ತಯಾರಿಸಿದ ಸರಳವಾದ ದೋಣಿಯನ್ನು ಬಿಡುವುದು. ದೋಣಿಯು ನೀರಿನಲ್ಲಿ ಚಲಿಸುವುದು. ಬಲೂನಿನಿಂದ ಸಂಕುಚಿತ ಗಾಳಿಯು ತಪ್ಪಿಸಿಕೊಳ್ಳುವುದರಿಂದ ದೋಣಿಯನ್ನು ಮುಂದಕ್ಕೆ ಚಲಿಸುತ್ತದೆ. ಈ ತತ್ವವನ್ನು ಆಧರಿಸಿ ನಿತ್ಯಜೀವನದಲ್ಲಿ ಅನೇಕ ಸಂದರ್ಭದಲ್ಲಿ ನ್ಯೂಟನ್ ಚಲನೆಯ ಮೂರನೇ ನಿಯಮವನ್ನು ಬಳಸಿಕೊಳ್ಳುತ್ತೇವೆ.

**ನಿಯಮ** : ಪ್ರತಿಯೊಂದು ಕ್ರಿಯೆಯೂ ಸಮನಾದ ಮತ್ತು ವಿರುದ್ಧವಾದ ಪ್ರತಿಕ್ರಿಯೆಯನ್ನು ಹೊಂದಿರುತ್ತದೆ.

## ಕಂಪ್ಯೂಟರ್ ಕ್ಲಬ್ ಸರ್ವೇ ಪ್ರಾಜೆಕ್ಟ್‌ಗಳು ಮಕ್ಕಳ ಕಲಿಕಾ ಸಾಮರ್ಥ್ಯ ಹೆಚ್ಚಿಸುತ್ತದೆ


ಆಧುನಿಕ ಯುಗಕ್ಕೆ ಕಂಪ್ಯೂಟರ್ ಅಗತ್ಯತೆ ಎಷ್ಟಿದೆ ಎಂದರೆ ಮಾನವ ತನ್ನ ಎಲ್ಲಾ ದೈನಂದಿನ ಕಾರ್ಯಕ್ಕೆ ಕಂಪ್ಯೂಟರ್‌ನ ಮೇಲೆ ಅವಲಂಬಿತನಾಗಿದ್ದಾನೆ. ಇತ್ತೀಚಿನ ದಿನಗಳಲ್ಲಿ ಕಂಪ್ಯೂಟರ್ ಜ್ಞಾನ ಹೊಂದಿಲ್ಲದವರನ್ನು ಅನಕ್ಷರಸ್ಥರಂತೆ ನೋಡುತ್ತಾರೆ. ಇದನ್ನರಿತ ಸಂಸ್ಥೆ ಪ್ರಾಥಮಿಕ ಶಿಕ್ಷಣದಲ್ಲಿ ಕಂಪ್ಯೂಟರ್ ಕಲಿಕೆಗೆ ಒತ್ತುನೀಡುತ್ತಿದೆ.

ಈವರೆಗೆ ಮಕ್ಕಳಿಗೆ ಎಂಎಸ್.ವರ್ಡ್, ಎಕ್ಸೆಲ್‌ಗೆ ಸಂಬಂಧಿಸಿದಂತೆ ಮೂಲಭೂತ ಜ್ಞಾನ ತಿಳಿಸಲಾಯಿತು. ಕಂಪ್ಯೂಟರ್ ಜ್ಞಾನವನ್ನು ಮಗು ತನ್ನ ದೈನಂದಿನ ಜೀವನದಲ್ಲಿ ಬಳಕೆ ಮಾಡುವ ಸಾಮರ್ಥ್ಯ ಮಕ್ಕಳಲ್ಲಿ ಮೂಡಿಸಲಾಗುತ್ತಿದೆ. ಈ ಮೂಲಕ ಮಕ್ಕಳು ಭವಿಷ್ಯದಲ್ಲಿ ಸರಾಗವಾಗಿ ಕಂಪ್ಯೂಟರ್ ಬಳಕೆ ಮಾಡುತ್ತಾರೆ.



ಸರ್ವೇ ಪ್ರಾಜೆಕ್ಟ್‌ಗಳು ಮಕ್ಕಳು ತಿಳಿದ ಎಲ್ಲಾ ಜ್ಞಾನವನ್ನು ಬಳಸಿ ಸ್ವಸಾಮರ್ಥ್ಯದಿಂದ ತನ್ನ ಸುತ್ತ ಮುತ್ತಲಿನಲ್ಲಿರುವ ಹಲವಾರು ಸಮಸ್ಯೆಗಳ ಪತ್ತೆಹಚ್ಚಿ, ಅವುಗಳನ್ನು ಪರಿಹರಿಸುವ ಸಾಮರ್ಥ್ಯನ್ನು ಸರ್ವೇ ಪ್ರಾಜೆಕ್ಟ್ ತಿಳಿಸುತ್ತದೆ. ಮಕ್ಕಳು ಯಾವ ಕ್ಷೇತ್ರದಲ್ಲಿ ಆಸಕ್ತಿಹೊಂದಿದ್ದಾರೆ ಎಂಬುದನ್ನು ತಿಳಿಯಲು ದತ್ತಾಂಶಗಳನ್ನು ಸಂಗ್ರಹಿಸಲಾಗುತ್ತಿದೆ. ಆ ನಂತರ ದತ್ತಾಂಶ ವಿಶ್ಲೇಷಣೆ ಮಾಡಿ ತೀರ್ಮಾನ ತೆಗೆದುಕೊಳ್ಳು ಸರ್ವೇ ವಿಷಯಕ್ಕೆ ಸಲಹೆ ಮತ್ತು ಮಾರ್ಗದರ್ಶನ ನೀಡಲು ಇದು ಸಹಾಯಕವಾಗಿದೆ. ಇಂತಹ ಸರ್ವೇಗಳು ದೈನಂದಿನ ಜೀವನದಲ್ಲಿ ಅನೇಕ ಸಂದರ್ಭದಲ್ಲಿ ಬರುತ್ತದೆ. ಅವುಗಳನ್ನು ಸೂಕ್ತ ರೀತಿಯಲ್ಲಿ ಸರ್ವೇ ಮಾಡಿ ಪರಿಹಾರ ಕಂಡುಕೊಳ್ಳಬಹುದಾಗಿದೆ.

## ವಿಜ್ಞಾನ ಪದಬಂಧ



### ಎಡದಿಂದ ಬಲಕ್ಕೆ

1) ಕೆಂಪು ಲಿಟ್ಮಸನ್ನು ಇದು ನೀಲಿ ಬಣ್ಣಕ್ಕೆ ತಿರುಗಿಸುತ್ತದೆ (3)
3) ಸೂರ್ಯ ಒಂದು (3)
7) ಕೊಬ್ಬು (ಬಲದಿಂದ ಎಡಕ್ಕೆ) (2)
8) ರುಚಿಯಾದ ತೊಳೆಭರಿತ ಹಣ್ಣು (3)
10) ಹಣ–ಗುಣಗಳೊಂದಿಗೆ ಜೀವಕ್ಕೂ ಕುತ್ತು ತರಬಲ್ಲದು (ಬಲದಿಂದ ಎಡಕ್ಕೆ) (2)
11) ಪಕ್ಷಿ ಜನ್ಯ ಪೌಷ್ಟಿಕ ಆಹಾರ (2)
12) 'ಮೇಲೇರು ಸಂಖ್ಯೆ (ಬಲದಿಂದ ಎಡಕ್ಕೆ) (2)
15) ವಸ್ತುವಿನ ದ್ರವ್ಯರಾಶಿ ಮತ್ತು ವೇಗೋತ್ಕರ್ಷಗಳ ಗುಣಲಬ್ಧ (ಬಲದಿಂದ ಎಡಕ್ಕೆ) (2)
17) ನೀರಿನ ವರ್ತುಲ ಚಲನೆ–ಅಪಾಯಕಾರಿ (ಬಲದಿಂದ ಎಡಕ್ಕೆ) (2)
19) ಅನ್ನದಗುಳು ಕಂಡು ಬಳಗ ಕೂಡಿಸುವ ಪಕ್ಷಿ (2)
20) ಉತ್ತಮ ಪೌಷ್ಟಿಕಾಂಶವುಳ್ಳ ಆಹಾರ ಧಾನ್ಯ(ಬಲದಿಂದ ಎಡಕ್ಕೆ) (3)
21) ನಿತ್ಯಹರಿದ್ವರ್ಣ ಕಾಡುಗಳಲ್ಲಿನ ಬೆಲೆಬಾಳುವ ಮರ (3)
24) 'ಡಿ' ವಿಟಮಿನ್ ಕೊರತೆಯಿಂದ ಬರುವ ರೋಗ (3)
25) ಅಮೂಲ್ಯ ಸಂಪನ್ಮೂಲಗಳ ಆಗರ (3)

### ಮೇಲಿಂದ ಕೆಳಕ್ಕೆ

2) ಸಸ್ಯ ಹಾಗೂ ಪ್ರಾಣಿ ಹೊರಹಾಕುವ ಬೇಕಿಲ್ಲದ ವಸ್ತು (2)
4) 'ನಶಿಸುವ' ಸಾಂಕ್ರಾಮಿಕ ರೋಗ (2)
5) ನಾರಿನ ಬೆಳೆಗಳಲ್ಲಿ ಅಗ್ಗವಾದುದು (3)
6) ಕೆಸರಲ್ಲಿ ಬೆಳೆದ–ಕೊಳೆಯಿರುವ ಹೂ (2)
8) ಪ್ರಮುಖ ವಾಣಿಜ್ಯ ಬೆಳೆ–ಎಳೆಗಳನ್ನೊಳಗೊಂಡಿದೆ (3)
9) ವೃತ್ತಪಥದಲ್ಲಿ ಚಲಿಸು (2)
11) ಸಂಗೀತವಾದ್ಯ (3)
13) ಬೆಂದ ಆಹಾರ ರಾಸಾಯನಿಕವಾಗಿ ವಿಘಟಿಸುವ ಕ್ರಿಯೆ (3)
14) ಖಗೋಳ ವಿಜ್ಞಾನಿಗಳ ವಿಕ್ಷಣಾರಂಗ (3)
16) ಹತ್ತಿರ! ಲೇಪಿಸುವ ಕ್ರಿಯೆಯೇ? (2)
17) ಆಮ್ಲದ ರುಚಿ (ಕೆಳಗಿನಿಂದ ಮೇಲಕ್ಕೆ) (2)
18) ಕೋತಿಯನ್ನು ಒಳಗೊಂಡ ಹೆಸರಿನ ಗ್ರಹ (3)
22) ಕಾಯ್ದ ಹಾಲಿನ ಮೇಲ್ಪದರ (ಕೆಳಗಿನಿಂದ ಮೇಲಕ್ಕ) (2)
23) ಕೋತಿಗೆ ಪರ್ಯಾಯ ಪದ (2)

---


ವಿಜ್ಞಾನ ಪದಬಂಧದ ಸರಿ ಉತ್ತರವನ್ನು ಕಳುಹಿಸಿದವರ ಹೆಸರು ಮತ್ತು ವಿಳಾಸ ಪ್ರಕಟಿಸಲಾಗುವುದು. ಅಲ್ಲದೇ ಸ್ವತಃ ವಿದ್ಯಾರ್ಥಿಗಳೇ ವಿಜ್ಞಾನ ಪ್ರಶ್ನೆಗಳನ್ನೊಳಗೊಂಡ ಸ್ವರಚಿತ ಪದಬಂಧವನ್ನು ರಚಿಸಿ, ಸಲ್ಲಿಸಿದರೆ ಅವರಿಗೆ ಸೂಕ್ತ ಬಹುಮಾನವನ್ನು ಸಹ ನೀಡಲಾಗುವುದು.

# » ಚಿತ್ರಕಲಾ ಅರಮನೆ «

### ಕೌಶಲ ಬೆಳವಣಿಗೆಗಾಗಿ


ಕಳೆದ 14 ವರ್ಷಗಳಿಂದ ಹನೂರು ತಾಲ್ಲೂಕಿನ 9 ಸರ್ಕಾರಿ ಶಾಲೆಗಳಲ್ಲಿ ಚಿತ್ರಕಲೆ ತರಗತಿಯನ್ನು ಸರ್ಕಾರೇತರ ಆಶ್ರಯ ಸಂಸ್ಥೆ ಪ್ರಾರಂಭಿಸಿದೆ. ಕಳೆದ ಮೂರು ತಿಂಗಳಲ್ಲಿ ಪೆನ್ಸಿಲ್ ಶೇಡಿಂಗ್, ಸ್ಟಿಲ್ ಲೈಫ್, ಪ್ರೊಟ್ರೇಟ್, ಲ್ಯಾಂಡ್‌ಸ್ಕೇಪ್‌ಗಳಂತಹ ವ್ಯಕ್ತಿ ಚಿತ್ರಗಳು, ವಸ್ತು ಚಿತ್ರಗಳನ್ನು ಬಿಡಿಸುತ್ತಿದ್ದಾರೆ. ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್, ನವೆಂಬರ್ ತಿಂಗಳಲ್ಲಿ ವಿವಿಧ ಶಾಲೆಯ ಮಕ್ಕಳು ಬಿಡಿಸಿರುವ ಚಿತ್ರಗಳನ್ನು ಈ ಮೇಲ್ಭಾಗದಲ್ಲಿ ತೋರಿಸಲಾಗಿದೆ. 9 ಶಾಲೆಯ ವಿದ್ಯಾರ್ಥಿಗಳು ಸುಂದರ ಕಲಾಪ್ರತಿಭೆಯನ್ನು ಪ್ರದರ್ಶಿಸುತ್ತಿದ್ದಾರೆ. ಮಕ್ಕಳಲ್ಲಿ ಉದುಗಿರುವ ಕೌಶಲ್ಯವನ್ನು ಓರೆಹಚ್ಚಿ ಆಶ್ರಯ ಸಂಸ್ಥೆಯ ನಿಯೋಜಿತ ಶಿಕ್ಷಕರಾದ ರಮೇಶ್‌ರವರು ಪೋಷಿಸುತ್ತಿದ್ದಾರೆ.

ಲಲಿತ ಕಲೆಗಳಲ್ಲಿ ಚಿತ್ರಕಲೆಯು ಕೂಡ ತನ್ನದೇ ಆದ ಮಹತ್ವವನ್ನು ಹೊಂದಿದೆ. ಚಿತ್ರಕಲೆಯು ಕೇವಲ ಅಭ್ಯಾಸವಲ್ಲ, ಮಾನವನು ತನ್ನ ಭಾವನೆಗಳನ್ನು, ದುಖಃ ದುಮ್ಮಾನಗಳನ್ನು ಹಾಗೂ ಸಂತೋಷವನ್ನು ವ್ಯಕ್ತಪಡಿಸುವಲ್ಲಿ ಪ್ರಮುಖ ಸ್ಥಾನವಹಿಸುತ್ತದೆ. ಮಕ್ಕಳ ಕಲಿಕೆಯಲ್ಲಿ ಸರಳ ಹಾಗೂ ಸೃಜನಾತ್ಮಕ ವಿದ್ಯಾಭ್ಯಾಸ ಮಾಡುವಲ್ಲಿ ಚಿತ್ರಕಲೆಯು ತನ್ನದೇ ಆದ ಛಾಪು ಮೂಡಿಸುತ್ತದೆ. ಇದರ ಮೂಲಕ ಪಠ್ಯೇತರ ಜ್ಞಾನಾಭಿರುಚಿಯನ್ನು ಗಳಿಸಿಕೊಳ್ಳಲು ನೆರವಾಗುತ್ತಿದೆ.











## ಬುಕ್ ಆಫ್ ದ ಮಂಥ್ ಕಾರ್ಯಕ್ರಮ ನಿರರ್ಗಳತೆ ಹೆಚ್ಚಿಸುತ್ತದೆ

ಶಿಕ್ಷಕರಿಲ್ಲದೆ ಕೇವೆಲ ವೆಬ್‌ಸೈಟ್‌ನಲ್ಲಿರುವ ಪಾಠಗಳನ್ನು ನೋಡಿ ತಮ್ಮ ಜ್ಞಾನಾರ್ಜನೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ನಿರೀಕ್ಷಿತ ಪಠ್ಯವನ್ನು ನಿಗದಿ ಕಾಲಾವಧಿಯಲ್ಲಿ ಪೂರ್ಣಗೊಳಿಸುತ್ತಾ ನಾಟಕಗಳನ್ನು ಮಾಡುತ್ತಿದ್ದಾರೆ. ಈ ಬಾರಿ ವಿಶೇಷವಾಗಿ ಶೇಕ್ಸ್‌ಪಿಯರ್ ನಾಟಕಗಳಲ್ಲಿ ಆಯ್ದ ಕೆಲವು ತುಣುಕುಗಳನ್ನು ಮಕ್ಕಳಿಗೆ ಕಿರು ಹೊತ್ತಿಗೆ ರೂಪದಲ್ಲಿ ನೀಡಲಾಗಿತ್ತು. ಗುಂಪು ಚರ್ಚೆ ಹಾಗೂ ವಾಕ್‌ಚಾತುರ್ಯ ಉತ್ತೇಜಿಸುವ ಈ ಕಾರ್ಯಕ್ರಮವು ಸಾಕಷ್ಟು ಮಕ್ಕಳಿಗೆ ಆಸಕ್ತಿ ಹೆಚ್ಚಿಸಿದೆ. ವೈಯಕ್ತಿಕ ಅಭಿಪ್ರಾಯಕ್ಕೆ ಮನ್ನಣೆ ನೀಡುತ್ತಿದೆ. ವಿಶ್ಲೇಷಣಾತ್ಮಕ ಚಿಂತನೆಗೆ, ತಾರ್ಕಿಕ ಮನೋಸಾಮರ್ಥ್ಯವನ್ನು ಉನ್ನತಿಗೊಳಿಸುವ ಕಾರ್ಯಕ್ರಮವು ಇದಾಗಿದ್ದು, ಕಳೆದ ವರ್ಷದಂತೆ ಈ ಬಾರಿ ಒಂಭತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 'ಬುಕ್ ಆಫ್ ದ ಮಂಥ್' ಕಾರ್ಯಕ್ರಮವನ್ನು ಆಶ್ರಯ ಸಂಸ್ಥೆಯು ಅನುಷ್ಠಾನಗೊಳಿಸಿದೆ. ಮಕ್ಕಳು ಹೆಚ್ಚು ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಲು ಇದು ಸಹಾಯಕವಾಗುತ್ತಿದೆ. ಕಥೆ, ಕಾದಂಬರಿಯಂತಹ ಅನೇಕ ಕೃತಿಗಳನ್ನು ಹೆಚ್ಚು ಹೆಚ್ಚು ಅಭ್ಯಸಿಸಲು ಇದು ಅನುಕೂಲಕರವಾಗಿದೆ. ಈ ಕಾರ್ಯಕ್ರಮದಲ್ಲಿ ತೊಡಗಿಕೊಳ್ಳುವುದರ ಮೂಲಕ ಮಕ್ಕಳು ತಮ್ಮ ಸುಪ್ತ ಪ್ರತಿಭೆಯನ್ನು ಪ್ರದರ್ಶಿಸಲು ಇದು ಸೂಕ್ತ ವೇದಿಕೆಯಾಗಿದೆ.








ಪರಿಹಾರ ಬೋಧನೆಯಲ್ಲಿ ಮಗು ತನ್ನ ಕಲಿಕಾ ಪ್ರದರ್ಶನ

## ಎಂ.ಎಲ್.ಎಲ್. ಚಟುವಟಿಕೆಯಿಂದ ಮಗುವಿನ ಜ್ಞಾನ ಸ್ಥಿರವಾಗುತ್ತದೆ

ಕಲಿಕೆಯನ್ನು ಅನುಕೂಲಿಸುವ ವಾತಾವರಣವು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಕಲಿಕಾಂಶಗಳ ಕಲಿಸುವುದು. ಪ್ರತಿ ಮಗುವಿನ ಜ್ಞಾನವು ಆಯಾಯ ವಯೋಮಾನಕ್ಕೆ ತಕ್ಕಂತೆ ಇರುತ್ತದೆ. ಅದಕ್ಕೆ ತಕ್ಕಂತೆ ನಿರೀಕ್ಷಿತ ಕಲಿಕೆಯನ್ನು ಉಂಟು ಮಾಡುವುದು ನಮ್ಮ ಕರ್ತವ್ಯವಾಗಿರುತ್ತದೆ. ಎಷ್ಟೇ ದಡ್ಡ ಮಗುವು ಕೂಡ ಕಲಿಯಲು ಶಕ್ತವಾಗಿರುತ್ತದೆ. ಅದಕ್ಕೆ ಸೂಕ್ತವಾದ ಚಟುವಟಿಕೆಯು ಮುಖ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಆಶ್ರಯ ಸಂಸ್ಥೆಯು ಅಗತ್ಯ ಚಟುವಟಿಕಾ ಖಜಾನೆಯನ್ನು ಸಿದ್ದಪಡಿಸಿ ಗ್ರಂಥಪಾಲಕಿಯರಿಗೆ ಒದಗಿಸುತ್ತಿದೆ. ಇದರ ಆಧಾರದ ಮೇಲೆ ಕಲಿಕೆಯನ್ನು ಉಂಟುಮಾಡುತ್ತಿದೆ. ಕನಿಷ್ಠ ಕಲಿಕಾ ಮಟ್ಟವನ್ನು ಆಧಾರಿಸಿ ಕಲಿಕಾಂಶಗಳನ್ನು ಕಲಿಸುತ್ತಿದೆ. ನಿರ್ದಿಷ್ಟಪಡಿಸಿದ ಕಲಿಕಾಂಶಗಳನ್ನು ಅರ್ಥಪೂರ್ಣವಾಗಿ ತಿಳಿಸಲು ಈ ಚಟುವಟಿಕೆಗಳು ಸಹಾಯಕವಾಗಿದೆ. ಈ ಚಟುವಟಿಕೆಗಳು ವಿದ್ಯಾರ್ಥಿ ಕೇಂದ್ರಿತ ಕಲಿಕೆಯಾಗಿದೆ.



ಸರ್ಕಾರಿ ಹಿ.ಪ್ರಾ.ಶಾಲೆ, ರಾಮಾಪುರ. ಹನೂರು ತಾಲ್ಲೂಕು

# » ಮಕ್ಕಳ ಅರಮನೆ «

ಪ್ರತಿಭೆ ಅನಾವರಣಗೊಳಿಸಲು

## ವಿದ್ಯಾರ್ಥಿ ಸ್ವರಚಿತ ಕಥೆ

**ಕಥೆಯ ಹೆಸರು : ಒಂದು ಕಥೆ ನಿಮ್ಮ ಜೊತೆ**

**ಬರೆದವರು: ಪ್ರಜ್ವಲ್.ಜಿ. 5ನೇ ತರಗತಿ ಕೆ.ಪಿ.ಎಸ್ ಲೊಕ್ಕನಹಳ್ಳಿ.**

ಅವನೊಬ್ಬ ಬಾರಿ ಶ್ರೀಮಂತ. ಶ್ರೀಮಂತಿಕೆಗೆ ಏನೇನು ವಸ್ತುಗಳನ್ನು ತೋರಿಸಬಹುದೋ ಎಲ್ಲವೂ ಅವನ ಬಳಿಯಲ್ಲಿದ್ದವು. ಅನೇಕ ಮರಮನೆಗಳಂಥ ಮನೆಗಳು, ನೂರಾರು ಕಾರುಗಳು ಅತ್ಯಂತ ಶ್ರೀಮಂತ ಕ್ಲಬ್‌ಗಳ ಸದಸ್ಯತ್ವ ಅವನಲ್ಲಿ ಇದ್ದವು. ಅವನು ವಾಸವಾಗಿದ್ದ ದೇಶದ ರಾಜಧಾನಿಯ ಅತ್ಯಂತ ಸಿರಿವಂತರ ಬಡಾವಣೆಯಲ್ಲಿ ಇವನದ್ದೆ ದೊಡ್ಡಮನೆ. ಸುಮಾರು ಐದು ಎಕರೆಯಷ್ಟು ಜಮೀನಿನಲ್ಲಿ ನಲವತ್ತು ಕೊಠಡಿಗಳಿದ್ದ ಅರಮನೆ. ಅದು ಅದರ ಮುಂದೆ ವಿಶಾಲವಾದ ಹೂತೋಟ ಅದರಲ್ಲಿ ಬಣ್ಣ ಬಣ್ಣದ ನೀರಿನ ಕಾರಂಜಿಗಳು, ರಾತ್ರಿಯಿಡಿ ಹೂದೋಟಗಳನ್ನು ಬೆಳಗಿಸುವ ಸಾಲುದೀಪಗಳಿದ್ದವು. ಈ ಮನೆಯನ್ನು ನೋಡಿಕೊಳ್ಳಲು ನೂರಾರು ಸೇವಕರು, ಅಡುಗೆಯವರು ಹೀಗೆ ಸಕಲ ಸೌಭಾಗ್ಯಗಳು ಆತನಿಗಿದ್ದವು. ಅವನಿಗೆ ಇವೆಲ್ಲ ಚಿಕ್ಕವಯಸ್ಸಿನಲ್ಲಿಯೇ ದೊರೆತಿದ್ದವು. ಅವನಿಗೊಬ್ಬನೇ ಮಗ ಆತನಿಗೆ ಸುಮಾರು ಹತ್ತು ವರ್ಷ. ಈ ಹುಡುಗನ ಮನಸ್ಸು ಬಲುಸೂಕ್ಷ್ಮ, ಸದಾ ಆತ ಹೊಸ ವಿಷಯಗಳನ್ನು ಹೊಸ ರೀತಿಯಲ್ಲಿ ಗಮನಿಸುವನು. ಒಂದು ದಿನ ತಂದೆ ಯೋಚಿಸುತ್ತಾ ನನ್ನ ಮಗ ಸದಾಕಾಲ ಶ್ರೀಮಂತಿಕೆಯ ಜೀವನ ನಡೆಸಿದರೆ ಆಗದ ಆತನಿಗೆ ನನ್ನ ಶ್ರಮ ಅರ್ಥವಾಗಬೇಕೆಂದು ನಿರ್ಧರಿಸುತ್ತಾನೆ. ಮಗನನ್ನು ಕರೆದುಕೊಂಡು ಅತ್ಯಂತ ಹಿಂದುಳಿದ ಬುಡಕಟ್ಟು ಜನಾಂಗದವರು ವಾಸಿಸುತ್ತಿದ್ದ ಅರಣ್ಯ ಪ್ರದೇಶಕ್ಕೆ ಕರೆದುಕೊಂಡು ಹೋದನು. ಅಲ್ಲಿಯ ಜನರಿಗೆ ಮನೆ ಎಂಬುದೇ ಇಲ್ಲ, ಗುಡಿಸಲು ಇದ್ದರೆ ಇತ್ತು ಇಲ್ಲದಿದ್ದರೆ ಆಕಾಶವೇ ಮನೆ. ತನ್ನ ಮಗನನ್ನು ಒಂದು ವಾರದವರೆಗೆ ತಮ್ಮ ಬಳಿಯೇ ಇರಿಸಿಕೊಳ್ಳಲು ಹಿರಿಯರ ಹತ್ತಿರ ಬಿಟ್ಟು ಹೋಗುತ್ತಾನೆ. ಒಂದು ವಾರದ ನಂತರ ಮಗನನ್ನು ಕರೆತರಲು ತೆರಳುತ್ತಾನೆ. ಮಗನು ಬೇಸರದಿಂದ ಇರುತ್ತಾನೆಯೋ ಎಂದು ಚಿಂತಿಸುತ್ತಾ ಆಶ್ಚರ್ಯದಿಂದ ನೋಡುತ್ತಿದ್ದನು. ಅಷ್ಟರಲ್ಲಿ ಮಗನು ಉಲ್ಲಾಸದಿಂದ ಬಳಿಗೆ ಬರುತ್ತಾನೆ. ಮಗನ ಸಂತೋಷ ನೋಡಿ ಖುಷಿಯಾಗುತ್ತದೆ. ಒಂದು ವಾರದ ಕಾಲ ನೀನು ಇಲ್ಲಿ ಜೀವನ ನಡೆಸಿರುವುದರಿಂದ ನಿನಗೆ ಹೇಗೆನಿಸಿತು? ಎಂದು ಮಗನನ್ನು ಕೇಳುತ್ತಾನೆ. ಹೌದಪ್ಪ ನಾವು ಎಷ್ಟು ಬಡವರು ಎಂಬುದು ತಿಳಿಯಿತು. ನಾವು ಬಡವರೇ? ಅವರು ಬಡವರಲ್ಲವೇ? ಎಂದು ತಂದೆ ಆಶ್ಚರ್ಯದಿಂದ ಕೇಳಿದನು. ನಮ್ಮ ಮನೆ ತೋಟದಲ್ಲಿ ಅವರ ಮನೆಯ ಮುಂದೆ ನದಿಯೇ ಇದೆ. ನಮ್ಮ ಬಂಗಲೆಯ ತೋಟವನ್ನು ಬೆಳಗಿಸಲು ನೂರಾರು ವಿದ್ಯುತ್ ದೀಪಗಳಿವೆ. ಅವರ ತೋಟ ಬೆಳಗಿಸಲು ಅಸಂಖ್ಯಾತ ತಾರೆಗಳಿವೆ. ಎಲ್ಲಕ್ಕಿಂತ ಮುಖ್ಯವಾಗಿ ನಮಗೆ ಅದು ಬೇಕು. ಇವೆಲ್ಲವನ್ನು ಪಡೆಯಬೇಕೆಂಬ ಆಸೆಗಳಿವೆ. ಆದರೆ ಅವರಿಗೆ ಆಸೆಗಳೇ ಇಲ್ಲ. ಅವರು ತುಂಬಾ ನಿರಾಳವಾಗಿದ್ದಾರೆ. ನಮಗಿಂತ ಹೆಚ್ಚು ಸುಖಿಗಳಾಗಿದ್ದಾರೆ. ಆದ್ದರಿಂದ ನಮಗಿಂತ ಅವರೇ ಶ್ರೀಮಂತರು ಎಂದನು. ಅಪ್ಪ ಮಗನ ಮಾತಿಗೆ ಬೆರಗಾದನು. ಅಪ್ಪ ನಾವು ಎಷ್ಟು ಬಡವರು ಎಂದು ತಿಳಿಸಿದ್ದಕ್ಕೆ ಧನ್ಯವಾದಗಳು ಎಂದು ನುಡಿದನು. ನಮ್ಮ ಸಂತೋಷ, ತೃಪ್ತಿ ಹಾಸ್ಯ ಮನೋಭಾವ ಆತ್ಮ ಗೌರವವಿದ್ದರೆ ಅದಕ್ಕಿಂತ ಶ್ರೀಮಂತಿಕೆ ಬೇರೆಯಿಲ್ಲ. ಏಕೆಂದರೆ ಇವುಗಳನ್ನು ಯಾವ ಹಣದಿಂದಲೂ ಕೊಂಡುಕೊಳ್ಳಲಾರದು. ನಿಮ್ಮಲ್ಲಿ ಸಾಕಷ್ಟು ಹಣವಿದ್ದು ತೃಪ್ತಿ ಸಂತೋಷಗಳಿಲ್ಲದಿದ್ದರೆ ನಮಗಿಂತ ಬಡವರು ಮತ್ತಾರು ಅಲ್ಲ. ಅಮೂಲ್ಯ ಎಂದರೆ ಯಾವುದಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲವೋ ಅದು. ನಮ್ಮ ಜೀವನ ಅಮೂಲ್ಯವಾಗುವುದು ಯಾವಾಗ ಗೊತ್ತೆ? ಪ್ರಪಂಚದ ಯಾವ ಶಕ್ತಿಯೂ ಆಸೆಯೂ, ಧನವೂ ನಮ್ಮ ಆತ್ಮಗೌರವನ್ನು ಕೊಂಡಕೊಳ್ಳಲು ಅಸಮರ್ಥವಾಗುತ್ತದೆಯೋ ಅಂದೇ ನಮ್ಮ ಬದುಕು ಅಮೂಲ್ಯವಾಗುತ್ತದೆ.

### ನಿಮಗಿದು ಗೊತ್ತೆ?

1) ವಿಂಗ್ಸ್ ಆಫ್ ಫೈರ್ ಪುಸ್ತಕದ ಕರ್ತೃ ಯಾರು?
2) ಅತ್ಯಂತ ಹಗುರವಾದ ಅನಿಲ ಯಾವುದು?
3) ಸಣ್ಣ ಕಥೆಗಳ ಜನಕ ಯಾರು?
4) ಅತ್ಯಂತ ಎತ್ತರವಾದ ವ್ಯಕ್ತಿ ಪ್ರತಿಮೆ ಎಲ್ಲಿದೆ?
5) ದ್ರವರೂಪದ ಲೋಹ ಯಾವುದು?
6) ಮೌರ್ಯ ಸಾಮ್ರಾಜ್ಯದ ಸ್ಥಾಪಕ ಯಾರು?
7) ವಿಟಮಿನ್ ಡಿ ಯಾವುದರಿಂದ ದೊರೆಯುತ್ತದೆ?
8) ತಾಪವನ್ನು ಅಳೆಯಲು ಬಳಸುವ ಸಾಧನ ಯಾವುದು?
9) ಚಲನೆಯ ನಿಯಮವನ್ನು ನಿರೂಪಿಸಿದವರಾರು?
10) ರೇಖಾಗಣಿತದ ಪಿತಾಮಹಾ ಯಾರು?

## ಈ ಸುಳಿವು ಉಪಯೋಗಿಸಿ ಕಥೆ ರಚಿಸಿ

**ಕಥೆಯ ಭಾಗ** : ದೇವಸ್ಥಾನ

**ವಿಷಯ** : ವರ

**ಸನ್ನಿವೇಶ** : ದೈವ ಭಕ್ತಿಯನ್ನು ಹೊಂದಿರುವ ಬಡ ಕುಟುಂಬ. ಮಗನಿಗೆ ಒಂದು ಸರ್ಕಾರಿ ನೌಕರಿ ಸಿಗಬೇಕೆಂದು ಪ್ರಾರ್ಥನೆ. ಶ್ರೀಮಂತ ಕುಟುಂಬದ ಮಗನು ಬುದ್ಧಿವಂತನಲ್ಲ. ಅದಕ್ಕಾಗಿ ಅವನು ದೇವರಿಗೆ ಹೋಮ ಮಾಡಿಸಿ ಪ್ರಾರ್ಥನೆ ಮಾಡುತ್ತಾನೆ.

**ಕಥೆಯ ತಿರುವು** : ದೇವರು ಪ್ರತ್ಯಕ್ಷವಾಗಿ ಬಡ ವಿದ್ಯಾರ್ಥಿಗೆ ವರ ನೀಡುತ್ತದೆ.

**ಮುಂದೆ ಏನಾಗುತ್ತದೆ** : ?


(ಈ ಮೇಲಿನ ಸುಳಿವು ಬಳಸಿ ಒಂದು ಕಥೆ ಬರೆದು ಸಲ್ಲಿಸಿ)


**ಪ್ರಬಂಧ ಸ್ಪರ್ಧೆ** ಆಧುನಿಕ ಜೀವನಕ್ಕೆ ಕಂಪ್ಯೂಟರ್ ಜ್ಞಾನದ ಅವಶ್ಯಕತೆ.

**ಪ್ರಬಂಧ ಸ್ಪರ್ಧೆ** ಪುರು ತನ್ನ ಯೌವ್ವನವನ್ನು ತಂದೆಗೆ ನೀಡಿದ್ದು ಸರಿಯೇ ತಪ್ಪೇ?

ಶಿಕ್ಷಕರ ಸಮ್ಮುಖದಲ್ಲಿ ಪ್ರಬಂಧ ಮತ್ತು ಚರ್ಚಾ ಸ್ಪರ್ಧೆಯನ್ನು ಏರ್ಪಡಿಸಲಾಗುವುದು. ವಿಜೇತ ಮಕ್ಕಳಿಗೆ ಬಹುಮಾನ ನೀಡಲಾಗುವುದು.

## ಸೀಡ್ ಸೆನ್‌ಸೋರಿಯಮ್ ಮಕ್ಕಳ ಚಿತ್ರಗಳು



ಐಶ್ವರ್ಯ
ಶಾಗ್ಯ

ಮಾದೇಶ
ಕಣ್ಣೂರು

## ಆಲ್‌ರೌಂಡರ್ಸ್ ಕ್ಲಬ್‌ನ ಮಕ್ಕಳು ಮಾಡಬೇಕಾದ ಪ್ರಾಜೆಕ್ಟ್

**ಚಿತ್ರಕಲೆ** : ನಿಮ್ಮ ಮನೆಯ ಯಾವುದಾದರೊಂದು ಭಾಗದಲ್ಲಿ ಮ್ಯೂರಲ್ ಪೇಯಿಂಟ್ ಮಾಡುವುದು

**ಕಥೆ** : ಕಥೆಯು ನಿಮ್ಮ ಹಳ್ಳಿಯ ವಿಚಾರಕ್ಕೆ ಸಂಬಂಧಿಸಿರಬೇಕು. ನಿಮ್ಮ ಗ್ರಾಮದ ಹಿನ್ನೆಲೆ ಅಥವಾ ಗ್ರಾಮದ ವಿಶೇಷತೆ ಸಂಬಂಧಿಸಿದಂತೆ ಕಥೆ ಇರಬೇಕು.

**ಸರ್ವೇ** : ನಿಮ್ಮ ಗ್ರಾಮದಲ್ಲಿರುವ ಜನರ ಆರೋಗ್ಯ ಸ್ಥಿತಿಗಳ ಬಗ್ಗೆ ಮಾಹಿತಿ ಸಂಗ್ರಹಿಸುವುದು. ಅಂದರೆ ನಿರ್ದಿಷ್ಟಪಡಿಸಿದ ವಯೋಮಾನದ ಜನರಿಗೆ ಬಂದಿರುವ ರೋಗಗಳು(ಬಿ.ಪಿ./ಶುಗರ್ ಅಥವಾ ಇನ್ನಿತರ) ಬಗ್ಗೆ ನಿಗದಿತ ನಮೂನೆಯಲ್ಲಿ ಮಾಹಿತಿ ಕ್ರೋಢೀಕರಿಸುವುದು.

**ನಾಟಕ** : ಗ್ರಾಮದ ಪ್ರಮುಖ ಸ್ಥಳದಲ್ಲಿ ಒಂದು ನಾಟಕವನ್ನು ಮಾಡಬೇಕು. ಉದಾಹರಣೆ ಸಾಮಾಜಿಕ ಪಿಡುಗುಗಳಿಗೆ ಸಂಬಂಧಿಸಿದಂತೆ ವರದಕ್ಷಿಣೆ ಕಿರುಕುಳ, ಬಾಲ್ಯ ವಿವಾಹ, ಬಾಲ ಕಾರ್ಮಿಕ ಪದ್ಧತಿ.

**ಕಂಪ್ಯೂಟರ್** : ಸರ್ವೇ ಕಾರ್ಯದಲ್ಲಿ ದೊರೆತ ದತ್ತಾಂಶಗಳನ್ನು ಕಂಪ್ಯೂಟರ್ ಬಳಸಿ ದಾಖಲೆಗಳನ್ನು ಟೈಪ್‌ಮಾಡುವುದು

**ಮೈಂಡ್ ಮ್ಯಾಪ್** : ನಿಮ್ಮ ಗ್ರಾಮದ ಸಂಬಂಧಿಸಿದಂತೆ ಒಂದು ಮೈಂಡ್ ಮ್ಯಾಪ್ ರಚಿಸಬೇಕು. ಅದು ಗ್ರಾಮದ ಸಮಸ್ಯೆಯಾಗಿರಬಹುದು. ಗ್ರಾಮದ ವಿವಿಧ ಸಮುದಾಯದ ಗುಂಪು, ರಸ್ತೆ, ವಿಶೇಷತೆಗಳು, ಸೌಲಭ್ಯಗಳು, ನೀರಿನ ಮೂಲ, ಪಂಚಾಯಿತಿ, ಹೀಗೆ ಇನ್ನಿತರ ಮಾಹಿತಿಗಳನ್ನು ಒಳಗೊಂಡ ಒಂದು ಮೈಂಡ್ ಮ್ಯಾಪ್‌ನ್ನು ತಯಾರಿಸಬೇಕು.

**ವಿಜ್ಞಾನ ಪ್ರಾಜೆಕ್ಟ್** : ನಿಮ್ಮ ಮನೆಗೆ ಉಪಯೋಗವಾಗುವ ರೀತಿಯ ಒಂದು ವಿಜ್ಞಾನ ಪ್ರಾಜೆಕ್ಟ್‌ನ್ನು ತಯಾರಿಸಬೇಕು. ಉದಾಹರಣೆಗೆ ಸೋಲಾರ್ ವಾಟರ್ ಹೀಟರ್. (ಕೆಲವು ಆಯ್ದ ವಿಜ್ಞಾನ ಪ್ರಾಜೆಕ್ಟ್‌ಗಳನ್ನು ನೀಡಲಾಗುವುದು. ಅವುಗಳನ್ನು ಮಾಡಬಹುದು)